

# ಕನಸೂ ನಾನೇ, ಕೊಲೆಯೂ ನಾನೇ

ಪ್ರತಿ ನಿಮಿಷವೂ ನಾನೇ, ಪ್ರತಿ ಶೂನ್ಯವೂ
ಪ್ರತಿ ದಿವಸವೂ ನಾನೇ, ಪ್ರತಿ ದೇಶವೂ
ಪ್ರತಿ ವರುಷವೂ ನಾನೇ, ಪ್ರತಿ ವೇಷವೂ

ಬಿರುಸು ಎಂಜಿನ್ನಿನೊಳಗೆ ಚಿಮ್ಮುತ್ತಿರುವ ವೇಗ
ಹೆದರಿ ಹೌಹಾರಿದ ಕುರಿಯ ನಿಟ್ಟುಸಿರು
ಕತ್ತಿಯೂ ನಾನೇ, ಹರಿವ ರಕ್ತವೂ ನಾನೇ

ಗುರಿಹಿಡಿದ ಕೋವಿಯೊಳಗೆ ತುಡಿಯುವ ಕ್ರೌರ್ಯ
ಬಳಲಿ ಬಡವಾಗಿರುವ ಕೂಲಿಯ ಸುಸ್ತು
ಉರಿಯೂ ನಾನೇ, ಸುಡುವ ಮನಸೂ ನಾನೇ

ಊರಿಗೂರ ಕಟ್ಟಿ ಕೆಡಗಿರುವ ವಿದ್ಯುತ್ತಿನ ನಿರ್ದಾಕ್ಷಿಣ್ಯ
ಕ್ರಮವಾಗಿ ಚಲಿಸುವ ಇರುವೆಗಳ ಶಿಸ್ತು
ಮಾತೂ ನಾನೇ, ಹುಳುಕು ದುರಾಶೆಯೂ ನಾನೇ

ಕುರುಡೂ ನಾನೇ, ಹಾದರವೂ ನಾನೇ, ಸಿಹಿ ವಿಷವೂ ನಾನೇ
ಕಣ್ಣೂ ನಾನೇ, ನಿಯತ್ತೂ ನಾನೇ, ಎಳೆ ನಗುವೂ ನಾನೇ

● ಕಮಲಾಕರ ಕಡವೆ

